ಶ್ರೀ ಅರಗ ಜ್ಞಾನೇಂದ್ರ: ಒಂದು ಗಂಟೆ ಮಾತ್ರ ಎಂದು ಲಿಮಿಟ್ ಹಾಕಿಕೊಂಡರೆ ಹೆಲ್ಡ್ ಓವರ್ ಆದ ಪ್ರಶ್ನೆಗಳನ್ನು ಯಾವಾಗ ತೆಗೆದುಕೊಳ್ಳುತ್ತೀರೆಂದು ಹೇಳಬೇಕು. ಏಕೆಂದರೆ ಸರ್ಕಾರದವರು ಸಮಯಕ್ಕೆ ಸರಿಯಾಗಿ ಉತ್ತರ ಕೊಡುವುದಿಲ್ಲ. ಆಗ ತಾವು ಅದನ್ನು ಹೆಲ್ಡ್ ಓವರ್ ಮಾಡಿಕೊಂಡು ಬೇರೆಬೇರೆ ಸಮಯದಲ್ಲಿ ತೆಗೆದುಕೊಳ್ಳುತ್ತೇನೆ ಎಂದು ಆಶ್ವಾಸನೆ ಕೊಡುತ್ತೀರಿ.

ಅಧ್ಯಕ್ಷರು: ನಾನು ಹೇಳುವುದನ್ನು ಕೇಳಿ. ಉಳಿದ ಪ್ರಶ್ನೆಗಳು ಲ್ಯಾಪ್ಸ್ ಆಗುವುದಿಲ್ಲ. ಅದನ್ನು ಯಾವರೀತಿ ತೆಗೆದುಕೊಳ್ಳಬೇಕು ಎನ್ನುವ ಬಗ್ಗೆ ನಾವು ಇವತ್ತು ಮಧ್ಯಾಹ್ನ ಲಂಚ್ ವೇಳೆಯಲ್ಲಿ ಡಿಸೈಡ್ ಮಾಡುತ್ತೇವೆ. ಈಗ ಪ್ರಶ್ನೋತ್ತರ ವೇಳೆ. ಈಗ ಸಮಯ 11 ಗಂಟೆ 17 ನಿಮಿಷ. 12 ಗಂಟೆ 17 ನಿಮಿಷಕ್ಕೆ ಮುಗಿಸುತ್ತೇನೆ.

2. ಪ್ರಶ್ನೋತ್ತರಗಳು

ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು.

ವಿಷಯ: ಹುಣಸೂರು ಸಾರ್ವಜನಿಕ ಆಸ್ಪತ್ರೆ ವಿಸ್ತರಣೆ ಕಾರ್ಯ.

301(2960)

ಶ್ರೀ ಪಾಪಣ್ಣ ವಿ. (ಹುಣಸೂರು) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಣಸೂರು ಜನರಲ್ ಆಸ್ಪತ್ರೆಯ ವಿಸ್ತರಣೆ ಕಾಮಗಾರಿ ನಿಧಾನಗತಿ ಆಗಲು ಕಾರಣವೇನು?

ಆ) ಈಗಾಗಲೇ ಲಕ್ಷಾಂತರ ರೂಪಾಯಿಗಳ ಉಪಕರಣಗಳು ಒಂದು ವರ್ಷವಾದರೂ ಕಟ್ಟಡದ ಕೆಲಸ ಮುಗಿಯದೆ ಉಪಕರಣಗಳನ್ನು ಹಾಗೆಯೇ ಇಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಈ ಆಸ್ಪತ್ರೆಯ ವಿಸ್ತರಣೆ ನವೀಕರಣ ಎಂದು ಪೂರ್ಣಗೊಳಿಸಲಾಗುವುದು?

ಎ.ಬಿ. ಮಲಕರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ಒಪ್ಪಂದದ ಮೇರೆಗೆ ಗುತ್ತಿಗೆದಾರರು ಜುಲೈ 1999ರಲ್ಲಿ ಕಾಮಗಾರಿಯನ್ನು ಪೂರ್ಣಗೊಳಿಸಬೇಕಿತ್ತು. ವಿಳಂಬಕ್ಕಾಗಿ ಗುತ್ತಿಗೆದಾರರಿಗೆ ನೋಟಿಸ್ ಜಾರಿ ಮಾಡಲಾಗಿದೆ. ಈಗ ಕಟ್ಟಡ ಕಾಮಗಾರಿ ಪೂರ್ಣಗೊಂಡಿದ್ದು ಕರ್ನಾಟಕ ವಿದ್ಯುತ್

ಪ್ರಸರಣ ನಿಗಮದಿಂದ ಹೆಚ್.ಟಿ.ಸಬ್ ಸ್ಟೇಷನ್ ಸಂಪರ್ಕ ದೊರೆಯದೆ ಪೂರ್ಣಗೊಂಡ ಹೊಸ ಕಟ್ಟಡವನ್ನು ಸಂಬಂಧಿಸಿದ ವೈದ್ಯಾಧಿಕಾರಿಗಳಿಗೆ ಹಸ್ತಾಂತರಿಸಿಲ್ಲ.

ಆ) ಕಟ್ಟಡದ ಯೋಜನೆ ಮೇರೆಗೆ ಬಹುತೇಕ ಹೈಟೆಕ್ ಉಪಕರಣಗಳು ಹಳೆಯ ಆಸ್ಪತ್ರೆಯ ಕಟ್ಟಡದಲ್ಲಿ ಅಳವಡಿಸ ಬೇಕಾದ್ದರಿಂದ ಉಪಕರಣಗಳನ್ನು ಆಸ್ಪತ್ರೆಯ ಹಳೆಯ ಕಟ್ಟಡ ವಿಭಾಗದಲ್ಲಿ ಅಳವಡಿಸಲಾಗಿದೆ ಹಾಗೂ ಕಾರ್ಯ ನಿರ್ವಹಿಸುತ್ತಿವೆ. ಕೆಲವು ಲ್ಯಾಬ್ ಉಪಕರಣಗಳನ್ನು ಭದ್ರವಾಗಿ ಇಡಲಾಗಿದೆ. ವಿದ್ಯುತ್ ಸಂಪರ್ಕ ಆದ ತಕ್ಷಣ ಉಪಕರಣಗಳನ್ನು ಪ್ರಾರಂಭಗೊಳಿಸಿ ಆಸ್ಪತ್ರೆಯ ವೈದ್ಯಾಧಿಕಾರಿಗಳಿಗೆ ಹಸ್ತಾಂತರಿಸಲಾಗುವುದು.

ಇ) ಕರ್ನಾಟಕ ವಿದ್ಯುತ್ ಪ್ರಸರಣಾ ನಿಗಮದಿಂದ ವಿದ್ಯುತ್ ಸಂಪರ್ಕ ದೊರೆತ ತಕ್ಷಣ ಆಸ್ಪತ್ರೆಯನ್ನು ಪ್ರಾರಂಭಿಸಲಾಗುವುದು.

ಶ್ರೀ ವಿ.ಪಾಪಣ್ಣ: ಸನ್ಮಾನ್ಯ ಅಧ್ಯಕ್ಷರೇ, ಈಗಾಗಲೇ ಉತ್ತರವನ್ನು ಮಂತ್ರಿಗಳು ಒದಗಿಸಿದ್ದಾರೆ. ಗುತ್ತಿಗೆದಾರರು ಜುಲೈ 1999ರಲ್ಲೇ ಕಾಮಗಾರಿಯನ್ನು ಪೂರ್ಣಗೊಳಿಸಬೇಕು. ಈಗ ಕಾಮಗಾರಿ ಪೂರ್ಣಗೊಂಡಿದೆ. ಹೆಚ್.ಟಿ. ಸಬ್ ಸ್ಟೇಷನ್ ಸಂಪರ್ಕ ದೊರೆಯದೆ ಸುಮಾರು ಲಕ್ಷಾಂತರ ರೂಪಾಯಿಗಳ ಉಪಕರಣಗಳನ್ನು ಒಂದು ವರ್ಷದಿಂದ ಹಾಗೇ ಇಟ್ಟಿದ್ದೇವೆ ಎಂದು ಉತ್ತರದಲ್ಲಿ ಹೇಳಿದ್ದಾರೆ. ವಿದ್ಯುತ್ ನಿಗಮದಿಂದ ಕನೆಕ್ಷನ್ ತೆಗೆದುಕೊಳ್ಳುವುದಕ್ಕೆ ಒಂದು ವರ್ಷ ಕಾಲ ಬೇಕಾಗಿತ್ತೇ ಎನ್ನುವುದನ್ನು ನಾನು ಮಾನ್ಯ ಮಂತ್ರಿಗಳಲ್ಲಿ ಕೇಳುತ್ತೇನೆ.

ಡಾ: ಎ.ಬಿ.ಮಾಲಕರೆಡ್ಡಿ: ಎಲೆಕ್ಟ್ರಿಕ್ ಕನೆಕ್ಷನ್ ದೆಸೆಯಿಂದ ಇದು ವಿಳಂಬವಾಗಿತ್ತು. ವಿದ್ಯುತ್ ನಿಗಮದವರು ಡಿಮಾಂಡ್ ಮಾಡಿದಂತೆ ಡೆಪಾಸಿಟ್ ಇಟ್ಟು 3-4 ತಿಂಗಳಾಗಿದೆ. ಈಗಾಗಲೇ ನಮ್ಮ ಇಲಾಖೆಯ ಅಧಿಕಾರಿಗಳು ಪರ್ಸನಲ್ ಇಂಟರೆಸ್ಟ್ ತೆಗೆದುಕೊಂಡು ಮೇಲಿನ ಅಧಿಕಾರಿಗಳ ಜೊತೆ ಮಾತನಾಡಿದ್ದಾರೆ. ತಕ್ಷಣ ಇದರ ವ್ಯವಸ್ಥೆ ಮಾಡುತ್ತೇವೆ.

ಶ್ರೀ ವಿ.ಪಾಪಣ್ಣ: ಮಾನ್ಯ ಅಧ್ಯಕ್ಷರೇ, ಈಗಾಗಲೇ ಮಾನ್ಯ ಮಂತ್ರಿಗಳು ಹೇಳಿದ ಹಾಗೆ 3-4 ತಿಂಗಳ ಹಿಂದೆ ಡೆಪಾಸಿಟ್ ಮಾಡಿದ್ದಾರೆ. ಆದರೂ ವಿದ್ಯುಚ್ಛಕ್ತಿ ಸಂಪರ್ಕ ತೆಗೆದುಕೊಳ್ಳುವುದರಲ್ಲಿ ವಿಫಲರಾಗಿದ್ದಾರೆ ಎಂದು ಮಾನ್ಯ ಮಂತ್ರಿಗಳೇ ಒಪ್ಪಿಕೊಂಡ ಹಾಗೆ ಆಯಿತು. ಈಗ ಅಲ್ಲಿ ಏನಾಗಿದೆ ಎಂದರೆ, ನವೀಕರಣ ಮಾಡಿದಂಥ ಆಸ್ಪತ್ರೆಯ ಮುಂಭಾಗದ ಎಲಿವೇಷನ್ ಸರಿಯಾಗಿ ಇಲ್ಲ. 20 ಚದುರ ಎಲಿವೇಷನ್ ಮಾಡಬೇಕು ಮುಂದೆ ಎಲಿವೇಷನ್ ಚೆನ್ನಾಗಿ ಮಾಡಬೇಕು ಎನ್ನುವ ಹಂತದಲ್ಲಿದೆ. ದಯಮಾಡಿ ಕೆಲಸವನ್ನು ಪ್ರಾರಂಭ ಮಾಡಲಿ, ಆಸ್ಪತ್ರೆಯನ್ನು ಪ್ರಾರಂಭ ಮಾಡಲಿ. ಎಲಿವೇಷನ್ ಬೇಕಾದರೆ ನಿಧಾನವಾಗಿ ಮಾಡಿಕೊಳ್ಳಲಿ ಎಂದು ಮಾನ್ಯ ಮಂತ್ರಿಗಳಲ್ಲಿ ನಾನು ಮನವಿ ಮಾಡುತ್ತೇನೆ.

ಡಾ: ಎ.ಬಿ.ಮಾಲಕರೆಡ್ಡಿ: ಆಗಬಹುದು.

ವಿಷಯ: ಗುಡಿಬಂಡೆ ಹಾಗೂ ಬಾಗೇಪಲ್ಲಿ ತಾಲ್ಲೂಕುಗಳಲ್ಲಿ ಕುಡಿಯುವ ನೀರಿನ ಸಮಸ್ಯೆ.

302(3051)

ಶ್ರೀ ಸಂಪಂಗಿ.ಎನ್.(ಬಾಗೇಪಲ್ಲಿ): ಮಾನ್ಯ ಗ್ರಾಮೀಣಾಭಿವೃದ್ಧಿ, ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಡಿಬಂಡೆ ಹಾಗೂ ಬಾಗೇಪಲ್ಲಿ ತಾಲ್ಲೂಕುಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಆ) ಹಾಲಿ ಸರಬರಾಜು ಮಾಡುತ್ತಿರುವ ನೀರಿನಲ್ಲಿ ಫ್ಲೋರೈಡ್ ಅಂಶ ಜಾಸ್ತಿಯಿರುವುದರಿಂದ ಜನರಿಗೆ ತೊಂದರೆಯುಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಇ) ಉತ್ತಮ ಕುಡಿಯುವ ನೀರನ್ನು ಸಾಕಷ್ಟು ಸರಬರಾಜು ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಎಂ.ವೈ ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):

ಅ) ಗುಡಿಬಂಡೆ ಮತ್ತು ಬಾಗೇಪಲ್ಲಿ ತಾಲ್ಲೂಕಿನ ಕೆಲವು ಗ್ರಾಮೀಣ ಜನವಸತಿಗಳಲ್ಲಿ ಕುಡಿಯುವ ನೀರಿನ ಸಮಸ್ಯೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಆ) ಸದರಿ ತಾಲ್ಲೂಕುಗಳ ಕೆಲವು ಜನವಸತಿಗಳ ಕುಡಿಯುವ ನೀರಿನಲ್ಲಿ ಅಧಿಕ ಫ್ಲೋರೈಡಿನ ಅಂಶ ಕಂಡು ಬಂದಿದ್ದು, ಕುಡಿಯುವ ನೀರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಇ) ಗುಣಮಟ್ಟ ಸಮಸ್ಯೆ ಎದುರಿಸುತ್ತಿರುವ ಜನವಸತಿಗಳಿಗೆ ಸುರಕ್ಷಿತ ಕುಡಿಯುವ ನೀರಿನ ಪೂರೈಕೆಗಾಗಿ ಸಬ್-ಮಿಷನ್ ಕಾರ್ಯಕ್ರಮದಡಿ ಯೋಜನೆಗಳನ್ನು ರೂಪಿಸಿ, ಅನುದಾನ ಲಭ್ಯತೆಗನುಗುಣವಾಗಿ, ಯೋಜನೆಗಳನ್ನು ಹಂತ ಹಂತವಾಗಿ ಅನುಷ್ಠಾನಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.